## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಸ್ಪೆಷಲ್ ಕೇಸ್: 54/2019

ಪ್ರಾಸಾ- 19
ಚಾಸಾ- 33

| | | |
|---|---|---|
| ಸಾಕ್ಷಿದಾರರ ಹೆಸರು: | | ನಾಗರಾಜು |
| ತಂದೆಯ ಹೆಸರು | : | ಬಸವರಾಜು |
| ವಯಸ್ಸು | : | 45 ವರ್ಷ |
| ವೃತ್ತಿ | : | Alternative Nodel Officer, BSNL, Bengaluru |
| ವಾಸ | : | ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 08-10-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ: (Through V.C. in Jitsi meet app).</u>**

1. ನಾನು 2019 ರಿಂದ BSNL ನಲ್ಲಿ Alternative Nodel Officer ಆಗಿ ಕೆಲಸ ಮಾಡುತಿದ್ದೇನೆ.

2. ದಿನಾಂಕ 10-12-2019 ರಂದು ಮಾನ್ಯ ಕೊಡಗು ಎಸ್.ಪಿ. ರವರ ಕಛೇರಿಯಿಂದ ಮೊಬೈಲ್ ನಂಬರ್ 9449449824 ಗೆ ಸಂಬಂಧಿದಂತೆ ದಿನಾಂಕ 19-10-2019 ರಿಂದ ದಿನಾಂಕ 21-10-2019 ರವರೆಗೆ ಸಿ.ಡಿ.ಆರ್ ಹಾಗೂ ಸಿ.ಎ.ಎಫ್ ನ್ನು ನೀಡುವಂತೆ ಕೋರಿಕೊಂಡ ಮೇರೆಗೆ ನಾನು ಸದರಿ ನಂಬರ್ ಗಣಪತಿ ಪಿ.ಎಂ. ರವರ ಹೆಸರಿನಲ್ಲಿ ಇದ್ದು, ಸದರಿ ಮೊಬೈಲ್ ನಂಬರ್ ಗೆ ಸಂಬಂಧಿಸಿದ್ದ ಸಿ.ಡಿ.ಆರ್ ಹಾಗೂ ಸಿ.ಎ.ಎಫ್

ಗಳನ್ನು ನಾನು ಕಳುಹಿಸಿಕೊಟ್ಟಿದ್ದೇನೆ, ಅದರೊಂದಿಗೆ ಕಲಂ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರವನ್ನು ಸಹ ನೀಡಿದ್ದೇನೆ. ನಾನು ನೀಡಿದ ಸಿ.ಡಿ.ಆರ್ ಹಾಗೂ ಸಿ.ಎ.ಎಫ್ ಹಾಗೂ ದೃಢೀಕರಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಸಿ.ಎ.ಎಫ್ ನ್ನು ನಿಪಿ-22 ಎಂದು, ಸಿ.ಡಿ.ಆರ್ ನ್ನು ನಿಪಿ-23 ಎಂದು, ಕಲಂ 65(ಬಿ) ಅಡಿಯಲ್ಲಿ ನೀಡಿದ ದೃಢೀಕರಣ ಪತ್ರವನ್ನು ನಿಪಿ-24 ಎಂದು, ಅವುಗಳ ನೀಡಿದ ಬಗ್ಗೆ ಸಾಕ್ಷಿ ಸಹಿಯನ್ನು ಕ್ರಮವಾಗಿ ನಿಪಿ-22(ಎ), ನಿಪಿ-23(ಎ) ಮತ್ತು ನಿಪಿ-24(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು- ಆರೋಪಿತರ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:**

3. ನಾನು ನೀಡಿದ ಸಿ.ಡಿ.ಆರ್ ನಲ್ಲಿ 9449449824 ನಂಬರ್ ನಿಂದ 9535376145 ಗೆ ಯಾವುದೇ ಫೋನ್ ಕಾಲ್ ಹೋಗಿಲ್ಲ ಎಂದರೆ ಸರಿ. ಅದೇ ರೀತಿ 9535376145 ನಂಬರ್ ನಿಂದ 9449449824 ನಂಬರ್ ಗೆ ಯಾವುದೆ ಕರೆ ಹೋಗಿದೆ ಎಂದರೆ ಸಾಕ್ಷಿ ಆ ಬಗ್ಗೆ ನಮಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಂಬರ್ ಗ location ಗಳು ಸಿ.ಡಿ.ಆರ್ ನಲ್ಲೇ ಇರುತ್ತದೆ. ಸದರಿ ಎರಡು ನಂಬರ್ ಗಳ ವಾಯ್ಸ್ ಕಾಲ್ ಗಳು, ಎಸ್.ಎಂ.ಎಸ್ ಗಳು ಇತ್ತಾ ಎಂದರೆ ಸಾಕ್ಷಿ ಸದರಿ ಎರಡು ನಂಬರ್ ಗಳ ಮಧ್ಯ ಆದ voice call, location ಮತ್ತು duration ಮಾತ್ರ ಗೊತ್ತಾಗುತ್ತದೆ ಆದರೆ, ಏನು ಮಾತನಾಡಿದ್ದಾರೆ ಎಂದು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

**<u>ಮರುವಿಚಾರಣೆ:</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ